

# ಅನೂಪ್ ಆಲಾಪನಾ...

ಕಾವೇರಿ ಗಲಭೆ – ಬಂದ್ ಕಾವಿನ ನಡುವೆಯೂ ವಿಜಯ್‌ಪ್ರಸಾದ್ ನಿರ್ದೇಶನದ 'ನೀರ್‌ದೋಸೆ' ಸಿನಿಮಾ ಗೆದ್ದಿದೆ. ಈ ಸಿನಿಮಾವನ್ನು ಚಂದಗಾಣಿಸಿರುವ ಶ್ರೇಯಸ್ಸಿನಲ್ಲಿ ದೊಡ್ಡದೊಂದು ಪಾಲು ಸಂಗೀತ ನಿರ್ದೇಶಕ ಅನೂಪ್ ಸೀಳಿನ್ ಅವರಿಗೂ ಸಲ್ಲಬೇಕು. ಎಂದಿನಂತೆ ಮಾಧುರ್ಯ ಹಾಗೂ ಪ್ರಯೋಗಶೀಲತೆಯ ಅವರ ಹಂಬಲ 'ನೀರ್‌ದೋಸೆ'ಯಲ್ಲೂ ಎದ್ದುಕಾಣುವಂತಿದೆ.

ಇತರ ಸಂಗೀತ ನಿರ್ದೇಶಕರೆಲ್ಲ ಒಂದಾದ ನಂತರ ಒಂದು ಚಿತ್ರಗಳಿಗೆ ಸಂಗೀತ ಸಂಯೋಜಿಸಿ ಸಂಖ್ಯಾದೃಷ್ಟಿಯಲ್ಲಿ ಮುಂಚೂಣಿಯಲ್ಲಿದ್ದರೆ, ಅನೂಪ್ ಗುಣಮಟ್ಟವೇ ಮುಖ್ಯ ಎನ್ನುತ್ತಿದ್ದಾರೆ. ಈವರೆಗೆ ಅವರು ಸಂಗೀತ ನೀಡಿರುವ ಪ್ರತಿ ಸಿನಿಮಾದಲ್ಲೂ ಒಂದಲ್ಲಾ ಒಂದು ಹಾಡು ವಿಶೇಷವಾಗಿರುವುದು ಗಮನಾರ್ಹ. ಹಾರರ್–ಥ್ರಿಲ್ಲರ್ ಕಥನದ 'ಮಡಮಕ್ಕಿ' ಚಿತ್ರದಲ್ಲೂ ಅನೂಪ್ ರುಜು ಕಾಣಿಸಿಕೊಂಡಿತ್ತು. 'ನೀರ್‌ದೋಸೆ' ಚಿತ್ರದ 'ಹೋಗಿ ಬಾ ಬೆಳಕೇ' ಗೀತೆಯಂತೂ ಇತ್ತೀಚಿನ ವರ್ಷಗಳ ಅತ್ಯುತ್ತಮ ಗೀತೆಗಳಲ್ಲೊಂದು.

ಪ್ರಸ್ತುತ ಚಿತ್ರಮಂದಿರಗಳ ಹೊಸ್ತಿಲಲ್ಲಿರುವ 'ನಟರಾಜ ಸರ್ವಿಸ್' ಚಿತ್ರದ ಗೀತೆಗಳು ಕೂಡ ಸಹೃದಯರ ಗಮನಸೆಳೆದಿರುವುದು ಅನೂಪ್ ಕುರಿತ ನಿರೀಕ್ಷೆ ಹೆಚ್ಚಿಸುವಂತಿದೆ. ಅಂದಹಾಗೆ, ಸಿನಿಮಾದಾಚೆಗೆ ಅನೂಪ್‌ರ ವೈಯಕ್ತಿಕ ಬದುಕಿನಲ್ಲೂ ಹೊಸ ಆಲಾಪ ಕೇಳಿಸುತ್ತಿದೆ. ತಿಂಗಳ ಕೂಸು ಆಲಾಪನಾ, ಅನೂಪ್‌ಗೆ ಅಪ್ಪನ ಸ್ಥಾನಕ್ಕೆ ಬಡ್ತಿ ನೀಡಿದ್ದಾಳೆ!



# ಸುಮಂತ್‌ನ '3ಡಿ' ಪಾತ್ರ

ಯಶಸ್ಸಿಗಾಗಿ ಮರಳಿ ಮರಳಿ ಯತ್ನವ ಮಾಡುತ್ತಿರುವ ಸುಮಂತ್ ಶೈಲೇಂದ್ರ ಈಗ 'ಲೀ' ಹೆಸರಿನ ಚಿತ್ರದಲ್ಲಿ ನಟಿಸಿದ್ದಾರೆ. ಚಿತ್ರೀಕರಣ ಮುಗಿಸಿರುವ ಚಿತ್ರತಂಡ, ಈಗ ಚಿತ್ರವನ್ನು ನೇರ್ಪುಗೊಳಿಸುವ ತಾಂತ್ರಿಕ ಕೆಲಸಗಳಲ್ಲಿ ತೊಡಗಿಕೊಂಡಿದೆ.

ಲೀ ಎಂದಕೂಡಲೇ ನೆನಪಿಗೆ ಬರುವುದು ಬ್ರೂಸ್ ಲೀ. ಕನ್ನಡ ಚಿತ್ರದ 'ಲೀ' ಕೂಡ ಸಾಹಸಿಯೇ ಎನ್ನುತ್ತಾರೆ ಚಿತ್ರದ ನಿರ್ದೇಶಕ ಶ್ರೀನಂದನ್. ಈ ಮೊದಲು ಜಗ್ಗೇಶ್ ನಟನೆಯ 'ಅಗ್ರಜ' ಚಿತ್ರವನ್ನು ನಿರ್ದೇಶಿಸಿದ್ದ ಶ್ರೀ, ಈಗ ಸುಮಂತ್‌ಗೆ ಹೊಸ ವರ್ಚಸ್ಸು ತಂದುಕೊಡುವ ಪ್ರಯತ್ನದಲ್ಲಿದ್ದಾರೆ. ಈ ಚಿತ್ರದಲ್ಲಿನ ನಟನೆಗಾಗಿ ಸುಮಂತ್ ಸಾಕಷ್ಟು ಪೂರ್ವಸಿದ್ಧತೆ ನಡೆಸಿದ್ದರಂತೆ. ಸಿನಿಮಾ ಚೆನ್ನಾಗಿ ಮೂಡಿಬಂದಿದ್ದು ತರುಣ ತರುಣಿಯರ ಮನಗೆಲ್ಲಲಿದೆ ಎನ್ನುವ ವಿಶ್ವಾಸ ನಿರ್ದೇಶಕರಿಗಿದೆ.

ತಮ್ಮ ಹಿಂದಿನ ಚಿತ್ರಗಳಿಗೆ ಹೋಲಿಸಿದರೆ 'ಲೀ' ಹೆಚ್ಚು ಸವಾಲು ಒಡ್ಡಿತು ಎಂದು ಸುಮಂತ್ ಹೇಳುತ್ತಾರೆ. ಯುವಪ್ರೇಮಿ, ಸಾಮಾನ್ಯ ಮನುಷ್ಯ ಹಾಗೂ ಮಾನಸಿಕ ಅಸ್ವಸ್ಥ – ಹೀಗೆ ಮೂರು ವಿಭಿನ್ನ ಆಯಾಮಗಳ ಪಾತ್ರವನ್ನು ಅವರನ್ನು ಚಿತ್ರದಲ್ಲಿ ಪೋಷಿಸಿದ್ದಾರಂತೆ.

ನಭಾ ನಟೇಶ್ ಹಾಗೂ ಸ್ನೇಹಾ 'ಲೀ' ಚಿತ್ರದ ನಾಯಕಿಯರು. ನಭಾ 'ವಜ್ರಕಾಯ'ದ ಗಯ್ಯಾಳಿ ಪಾತ್ರದಲ್ಲಿ ನಟಿಸಿದವರು. ಸ್ನೇಹಾ ಮುಂಬಯಿ ಮೂಲದ ಚೆಲುವೆ. ಇವರ ಜೊತೆಗೆ ರಂಗಾಯಣ ರಘು, ಸಾಧು ಕೋಕಿಲ, ಚಿಕ್ಕಣ್ಣ, ತಬಲಾ ನಾಣಿ, ರಾಹುಲ್ ದೇವ್, ಸುಚೇಂದ್ರ ಪ್ರಸಾದ್, ಮುಂತಾದವರು ತಾರಾಗಣದಲ್ಲಿದ್ದಾರೆ.